3) ಇಂಡಿ ಏತ ನೀರಾವರಿ ಯೋಜನೆ ವಿಸ್ತರಣೆ

4) ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ

5) ರಾಂಪುರ ಏತ ನೀರಾವರಿ ಯೋಜನೆ ವಿಸ್ತರಣೆ

6) ಮಲ್ಲಾಬಾದ್ ಏತ ನೀರಾವರಿ ಯೋಜನೆ

7) ಕೊಪ್ಪಳ ಜಿಲ್ಲೆಗೆ ನೀರು ಒದಗಿಸುವ ಯೋಜನೆ

8) ಭೀಮಾ ದಂಡೆ ಮತ್ತು

9) ಹೆರಕಲ್ ಏತ ನೀರಾವರಿ ಯೋಜನೆ

ಊ) ಘಟಪ್ರಭ ಎಡದಂಡೆ ನಾಲೆ ವ್ಯಾಪ್ತಿಯ ಬಾದಿತ ನೀರಾವರಿ ಕ್ಷೇತ್ರಕ್ಕೆ ಉದ್ದೇಶಿತ ಪೂರಕ ಏತ ನೀರಾವರಿ ವ್ಯವಸ್ಥೆಯಾದ ಚಮ್ಮಡ ಹಾಗೂ ಸಸಾಲಟ್ಟಿ ಯೋಜನೆಗೆ ನೀರು ಹಂಚಿಕೆ ಪರಿಶೀಲನೆಯಲ್ಲಿದೆ.

ಕಿರು ಅರಣ್ಯ ಭೂಮಿ ಕಬಳಿಕೆ

67(168) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತುರುಹಳ್ಳಿ ಕಿರು ಅರಣ್ಯದಲ್ಲಿ ಸರ್ವೆ ನಂ. 5ರಲ್ಲಿ 42 ಎಕರೆ ಮತ್ತು 41ರಲ್ಲಿ 94 ಎಕರೆ, 42ರಲ್ಲಿ 159 ಎಕರೆ ಭೂಮಿಯನ್ನು ಕರ್ನಾಟಕ ಅರಣ್ಯ ಅಧಿನಿಯಮ 1963ರ ಕಲಂ 64ಎ ಉಲ್ಲಂಘಿಸಿ ಅರಣ್ಯ ಇಲಾಖೆಯಿಂದ ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸುಪ್ರೀಂ ಕೋರ್ಟ್ ತೀರ್ಪು ಪ್ರಕಾರ ಅರಣ್ಯ ಎಂಬ ವ್ಯಾಜ್ಯ ಇರುವ ಈ ಜಮೀನನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಉಪಯೋಗಿಸಬಾರದು ಎಂಬ ನಿಯಮಗಳನ್ನು ಉಲ್ಲಂಘಿಸಿದ ಅಧಿಕಾರಿಗಳ ವಿವರ ನೀಡುವುದು;

ಇ) 2000ರಿಂದ ಈವರೆಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯದ ಬಗ್ಗೆ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು);

ಈ) ಶಿವಮೊಗ್ಗ ಜಿಲ್ಲೆ ಭದ್ರಾವತಿ/ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅವ್ಯವಹಾರ ನಡೆದ ಬಗ್ಗೆ ಲೋಕಾಯುಕ್ತರಿಗೆ ದೂರು ನೀಡಲಾಗಿದೆಯೇ? (ವಿವರ ನೀಡುವುದು)?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಸಚಿವರು)

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕುರುಹಳ್ಳಿ ಕಿರು ಅರಣ್ಯದಲ್ಲಿ ಕರ್ನಾಟಕ ಅರಣ್ಯ ಅಧಿನಿಯಮ 1963ರ ಕಲಂ 64ಎ ಉಲ್ಲಂಘಿಸಿ ಅರಣ್ಯ ಇಲಾಖೆಯಿಂದ ಕಬಳಿಸಿರುವ ವಿವರಗಳ ಪಟ್ಟಿ ಈ ಕೆಳಕಂಡಂತಿರುತ್ತದೆ ಹಾಗೂ ಸದರಿ ಒತ್ತುವರಿ ವಿಷಯವು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಕ್ರ. ಸಂ.	ಅರಣ್ಯ ಪ್ರದೇಶದ ವಿವರ	ಸರ್ವೆ ನಂ.	ಅಧಿಸೂಚನೆ ಪ್ರಕಾರ ಒಟ್ಟು ವಿಸ್ತೀರ್ಣ (ಎ.ಗು.)	ಒತ್ತುವರಿ ವಿಸ್ತೀರ್ಣ (ಎ.ಗು.)
1	ಉತ್ತರಹಳ್ಳಿ ಮನವರ್ತೆ ಕಾವಲ್	5	343.38	10.8
2	ತುರಹಳ್ಳಿ ಎಂ.ಎಫ್.	41	94.08	0.054
3	ತುರಹಳ್ಳಿ ಎಂ.ಎಫ್	42	159.13	23.36

ಆ) ಸುಪ್ರೀಂ ಕೋರ್ಟ್ ತೀರ್ಪು ಪ್ರಕಾರ ಅರಣ್ಯ ಎಂಬ ವ್ಯಾಜ್ಯ ಇರುವ ಈ ಜಮೀನುಗಳನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಯಾವುದೇ ಭೂಮಿಯನ್ನು ಉಪಯೋಗಿಸುವುದಕ್ಕೆ ಅನುವು ಮಾಡಿಕೊಟ್ಟಿರುವುದಿಲ್ಲ ಹಾಗೂ ನಿಯಮ ಉಲ್ಲಂಘಿಸಿದ ಅಧಿಕಾರಿಗಳು ಯಾರು ಇರುವುದಿಲ್ಲ ಇವು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳಾಗಿರುತ್ತವೆ.

ಇ) ಬೆಂಗಳೂರು ನಗರ ವಿಭಾಗದಲ್ಲಿ 2000 ರಿಂದ ಈವರೆಗೂ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷದ ಬಗ್ಗೆ ಯಾವುದೇ ಪ್ರಕರಣಗಳು ಇರುವುದಿಲ್ಲ.

ಈ) ಶಿವಮೊಗ್ಗ ಜಿಲ್ಲೆ ಭದ್ರಾವತಿ/ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಲೋಕಾಯುಕ್ತರಿಗೆ ದೂರು ನೀಡಿದೆ. ಪ್ರಕರಣಗಳು ಯಾವುದೂ ಇರುವುದಿಲ್ಲ.

ಭದ್ರಾ ಅಧುನೀಕರಣ ಕಾಮಗಾರಿ

69(170) ಶ್ರೀ ಕೆ.ಜಿ. ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?